ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಹೆಚ್ ಬಿ ಎಸ್ ವಕೀಲರಿಂದಃ

ನನ್ನ ತಂದೆಗೆ ಕೊಟ್ಟಂತಹ ಪಂಚಾಯತ್ ಪಾರಿಕತ್ ನ ಪ್ರತಿ ಏನಾಗಿದೆ ಎಂದು ನಾನು ಹೇಳಿಲ್ಲ ಎಂದರೆ ಸಾಕ್ಷಿಯು ನನ್ನ ತಾತ ಅವರ ಐದು ಜನ ಗಂಡು ಮಕ್ಕಳಿಗೆ ಪಂಚಾಯತ್ ಪಾರಿಕತ್ ನ ಒಂದೇ ಪ್ರತಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ವಿಭಾಗವಾದ ನಂತರ ನನ್ನ ತಂದೆಯ ಹೆಸರಿನಲ್ಲಿ ಇದ್ದಂತಹ ಪಹಣಿ ಅಥವಾ ತಂದೆಯ ಮರಣಾನಂತರ ನನ್ನ ಹೆಸರಿನಲ್ಲಿ ಇರುವ ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ತಂದೆ ತೀರಿಹೋದ ನಂತರ ಪಹಣಿ ನನ್ನ ತಾಯಿಯ ಹೆಸರಿಗೆ ಬಂದಿತ್ತು ಎಂದು ನುಡಿಯುತ್ತಾರೆ. ಸರ್ವೆ ನಂಃ489 ಕ್ಕೆ ಸಂಬಂಧಪಟ್ಟಂತೆ ನನ್ನ ತಾಯಿಯ ಹೆಸರಿನಲ್ಲಿರುವ ಯಾವುದೇ ಪಹಣಿ ಹಾಜರು ಮಾಡಿಲ್ಲ ಎಂದರೆ ಮಾಡಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಪಿ-1 ಮತ್ತು ನಿಪಿ-2 ಪಹಣಿಗಳನ್ನು ಬಿಟ್ಟರೆ ನನ್ನ ತಾತನ ಹೆಸರಿನಲ್ಲಿ ಇರುವ ಬೇರೆ ಯಾವುದೇ ಪಹಣಿ ಹಾಜರು ಮಾಡಿದಲ್ಲ ಎಂದರೆ ಸಾಕ್ಷಿಯು ತಾತ ಪಂಚಾಯತ್ ಪಾರಿಕತ್ ಮಾಡಿಕೊಟ್ಟಿದ್ದು ತಂದೆಯ ಮರಣಾನಂತರ ಪಹಣಿ ನನ್ನ ತಾಯಿಯ ಹೆಸರಿಗೆ ಬಂದಿದೆ ಎಂದು ನುಡಿಯುತ್ತಾರೆ.

ತಾತನ ಮರಣಾನಂತರ ಪ್ರತಿವಾದಿಗಳು ಸರ್ವೆ ನಂಃ489 ರಲ್ಲಿ 3 ಎಕರೆ 8 ಗುಂಟೆ ಬಗ್ಗೆ ತಮ್ಮ ಹೆಸರಿಗೆ ಪಹಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನಿಪಿ-4 ಮತ್ತು ನಿಪಿ-5 ಪೋಟೋಗಳನ್ನು ಸರ್ವೆ ನಂಃ489 ರ ಆಸ್ತಿಯಲ್ಲಿ ನಿಂತು ತೆಗೆಸಿಕೊಂಡಿದ್ದೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಬೇರೆ ಆಸ್ತಿಯಲ್ಲಿ ನಿಂತು ಆ ಫೋಟೋಗಳನ್ನು ತೆಗೆಸಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮಾವಿನ ಮರಗಳು ಮತ್ತು ಸರ್ಕಾರದಿಂದ ಕೊಡುವಂತಹ ಸಿಲ್ವರ್ ಮರಗಳು, ತೇಗದ ಮರಗಳು ಇವೆ. ಸಾಕ್ಷಿಯು ಮುಂದುವರೆದು ಸ್ವಲ್ಪ ಮರಗಳನ್ನು ಕಳ್ಳತನ ಮಾಡಿ ಕಡಿದಿದ್ದಾರೆ ಎಂದು ನುಡಿಯುತ್ತಾರೆ. ನಾನು ತೆಗೆಸಿಕೊಂಡ ಪೋಟೋಗಳಲ್ಲಿ ಯಾವುದೇ ಮರಗಳು ಇಲ್ಲ ಅದು ಖಾಲಿ ಜಾಗವಾಗಿದೆ ಎಂದರೆ ಸಾಕ್ಷಿಯು ಖಾಲಿ ಜಾಗದಲ್ಲಿ ಫೋಟೋ ತೆಗೆಸಿಕೊಂಡಿದ್ದೆ ಅನಂತರ ಮಾವಿನ ಸಸಿಗಳನ್ನು ನೆಡಿಸಿದ್ದೆ ಎಂದು ನುಡಿಯುತ್ತಾರೆ. ನಿಪಿ-4 ಮತ್ತು 5 ಫೋಟೋಗಳನ್ನು 4-5 ವರ್ಷಗಳ ಹಿಂದೆ ತೆಗೆಸಿಕೊಂಡಿದ್ದೆ. ಮಾವು ಮತ್ತು ತೇಗದ ಸಸಿಗಳನ್ನು 4 ವರ್ಷಗಳ ಹಿಂದೆ ಫೋಟೋ ತೆಗೆಸಿಕೊಂಡ ನಂತರ ನೆಡಿಸಿದ್ದೆ.

ಮಾವಿನ ಮರ, ತೇಗದ ಮರಗಳು ಇದ್ದರೂ ಅವುಗಳನ್ನು ಪ್ರತಿವಾದಿಗಳು ನೆಡಿಸಿದ್ದಾರೆ ಎಂದರೆ ಸರಿಯಲ್ಲ. ದಿ:7.8.1952 ರ ಪಂಚಾಯತ್ ಪಾರಿಕತ್ ಗೆ ಯಾರು ಯಾರು ಸಾಕ್ಷಿಗಳಾಗಿ ಸಹಿ ಹಾಕಿದ್ದರು ಎಂದರೆ ಸಾಕ್ಷಿಯು ಕೆಂಚಪ್ಪ, ಚಿಕ್ಕಬಸವಯ್ಯ ಸಹಿ ಹಾಕಿದ್ದರು ಎಂದ ನುಡಿಯುತ್ತಾರೆ. ಸದರಿ ಪಂಚಾಯತ್ ನಲ್ಲಿ ನಾನು ಭಾಗವಹಿಸಿರಲಿಲ್ಲ. ನಾನು ಸಣ್ಣವನಾಗಿದ್ದ ಕಾರಣ ಪಂಚಾಯತ್ ನಲ್ಲಿ ಭಾಗವಹಿಸಿರಲಿಲ್ಲ. ಪಂಚಾಯತ್ ಪಾರಿಕತ್ ಗೆ ಮೇಲೆ ಹೇಳಿದ ಇಬ್ಬರು ಸಾಕ್ಷಿಗಳಾಗಿ ಸಹಿ ಮಾಡಿದ್ದರು ಎಂದು ನನಗೆ ಯಾರು ಹೇಳಿದ್ದರು ಎಂದರೆ ಸಾಕ್ಷಿಯು ನಾನು ವಿದ್ಯಾವಂತನಲ್ಲ ನನಗೆ ನನ್ನ ತಾಯಿ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. 1952 ರ ಪಂಚಾಯತ್ ಪಾರಿಕತ್ ಮೂಲಕ ದಾವಾ ಸ್ವತ್ತು ನನ್ನ ತಂದೆಗೆ ಬರದ ಕಾರಣ ಪಹಣಿ ನನ್ನ ತಂದೆಯ ಹೆಸರಿಗೆ ಬಂದಿಲ್ಲ ಮತ್ತು ಅವರ ಮರಣಾನಂತರ ನನ್ನ ಹೆಸರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಸರ್ವೆ ನಂಬರ್ ನಲ್ಲಿ ಜಮೀನು ಬಂದಿಲ್ಲ ಅದಕ್ಕೆ ನಾವು ಖಾತೆ

ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮಗೆ ಬೇರೆ ಸರ್ವೆ ನಂಬರ್ ನಲ್ಲಿ ಆಸ್ತಿ ಬಂದಿದೆ ಎಂದರೆ ಸರಿಯಲ್ಲ. 1952 ರಲ್ಲಿ ವಿಭಾಗವಾಗಿ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಿದ್ದರೆ ಈ ದಾವೆಯನ್ನು 2012 ರಲ್ಲಿ ಹಾಕಲು ಕಾರಣವೇನು ಎಂದರೆ ಸಾಕ್ಷಿಯು ನಮಗೆ ತಿಳಿಯದಂತೆ ದಾವಾ ಆಸ್ತಿಯ ಖಾತೆ ಅವರು ಹೆಸರಿಗೆ ಮಾಡಿಕೊಂಡು ನಮ್ಮನ್ನು ಸ್ವತ್ತಿನಿಂದ ಹೊರ ಹಾಕುವ ಉದ್ದೇಶದಿಂದ ನಮಗೆ ತೊಂದರೆ ಕೊಡುತ್ತಿರುವ ಕಾರಣ ಈ ದಾವೆ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಹೆಸರಿಗೆ 1987-88 ರಲ್ಲಿ ಖಾತೆ ಆಗಿದೆ ಎಂದರೆ ಸರಿ. ಆಗಲೇ ಯಾಕೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ತಿಳುವಳಿಕೆ ಕಡಿಮೆ ಇದ್ದ ಕಾರಣ ಆಗಿರಲಿಲ್ಲ ನಂತರ ಪ್ರತಿವಾದಿಗಳು ತೊಂದರೆ ಕೊಟ್ಟ ಕಾರಣ ದಾಖಲೆ ಪಡೆದುಕೊಂಡು ಈ ದಾವೆ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಖಾತೆ ಮಾಡಿಕೊಡಿ ಎಂದು ಈ ದಾವೆಯನ್ನು ಹಾಕಿದ್ದೇನಾ ಎಂದರೆ ಹಾಕಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಈ ದಾವೆ ಹಾಕಲು ನನಗೆ ಜಮೀನು ಕೈ ತಪ್ಪಿ ಹೋಗಿದೆ ಎಂದು ಯಾವಗ ಗೊತ್ತಾಯಿತು ಎಂದರೆ ಸಾಕ್ಷಿಯು ಇಂದಿನಿಂದ ಸುಮಾರು 5 ವರ್ಷಗಳ ಹಿಂದೆ ತಿಳಿಯಿತು ಎಂದು ನುಡಿಯುತ್ತಾರೆ. ಈ ದಾವೆ ಹಾಕುವ ಸಮಯದಲ್ಲಿ ನನಗೂ ಮತ್ತು ಪ್ರತಿವಾದಿಗಳಿಗೆ ಗಲಾಟೆ ಆಗಿದ್ದು ಆ ಬಗ್ಗೆ ದೂರು ಕೊಟ್ಟಿದ್ದೆ, ಈ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. 1952 ರಲ್ಲಿ ಆಸ್ತಿ ವಿಭಜನೆ ಯಾಗುವಾಗ ನನ್ನ ತಾತ ಜೀವಂತವಾಗಿ ಇದ್ದರು. ಅವರು ಪಂಚಾಯತ್ ಪಾರಿಕತ್ ಗೆ ಸಹಿ ಮಾಡಿದ್ದಾರೆ. ನಾನು ವಿದ್ಯಾವಂತನಲ್ಲದ ಕಾರಣ ನನಗೆ ಸಹಿ ಗುರುತಿಸಲು ಆಗುವುದಿಲ್ಲ. ನಾನಾಗಲೀ ನನ್ನ ತಂದೆಯಾಗಲೀ ಯಾವತ್ತೂ ದಾವಾ ಸ್ವತ್ತಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಅನುಪಮ ಲಕ್ಷ್ಮಿ. ಬಿ)**
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.

ಪಿ.ಡಬ್ಲ್ಯೂ.1